# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ | : | 1003 (1100) |
| ಸದಸ್ಯರ ಹೆಸರು | : | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 17.03.2025. |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು. |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಎಷ್ಟು ಸರಕಾರಿ ಶಾಲೆಗಳಲ್ಲಿ ಆಂಗ್ಲ ಮಾಧ್ಯಮ ತರಗತಿಗಳನ್ನು ಮತ್ತು ಎಲ್‌ಕೆಜಿ /ಯುಕೆಜಿ ತರಗತಿಗಳನ್ನು ಪ್ರಾರಂಭಿಸಲಾಗಿದೆ; ಈ ತರಗತಿಗಳನ್ನು ಪ್ರಾರಂಭಿಸುವ ಬಗ್ಗೆ ಇಲಾಖೆಯ ಷರತ್ತುಗಳೇನು; ಈ ಹೆಚ್ಚುವರಿ ತರಗತಿಗಳಿಗೆ ಶಿಕ್ಷಕರನ್ನು ಯಾರು ಹೇಗೆ ನೇಮಿಸುತ್ತಿದ್ದಾರೆ; ಅವರಿಗೆ ಪಾವತಿಸುತ್ತಿರುವ ವೇತನ / ಗೌರವಧನ ಸಹಿತ ಸೇವಾ ನಿಯಮಗಳೇನು; | ಕರ್ನಾಟಕದಲ್ಲಿ ನಡೆಯುತ್ತಿರುವ ಎಲ್.ಕೆ.ಜಿ ಮತ್ತು ಯು.ಕೆ.ಜಿ ತರಗತಿಗಳ ಮಾಹಿತಿ ಈ ಕೆಳಗಿನಂತಿದೆ. |

| ಕ್ರ. ಸಂ | ಯೋಜನೆಗಳು | ಎಲ್.ಕೆ.ಜಿ & ಯು.ಕೆ.ಜಿ ಶಾಲೆಗಳ ಸಂಖ್ಯೆ |
|---|---|---|
| 01 | ಕರ್ನಾಟಕ ಪಬ್ಲಿಕ್ ಶಾಲೆ | 308 |
| 02 | 2020–21ನೇ ಸಾಲಿನ ಪಿ.ಎ.ಬಿ ಅನುಮೋದಿತ ಎಸ್.ಡಿ.ಎಂ.ಸಿ ರವರು ಪ್ರಾರಂಭಿಸಿರುವ ಪೂರ್ವ ಪ್ರಾಥಮಿಕ ತರಗತಿಗಳು | 908 |
| 03 | 2023–24ನೇ ಸಾಲಿನ ಪಿ.ಎ.ಬಿ ಅನುಮೋದಿತ ಪೂರ್ವ ಪ್ರಾಥಮಿಕ ತರಗತಿಗಳು | 262 |
| 04 | 2024–25ನೇ ಸಾಲಿನ ಪಿ.ಎ.ಬಿ ಅನುಮೋದಿತ ಪೂರ್ವ ಪ್ರಾಥಮಿಕ ತರಗತಿಗಳು | 316 |
| 05 | 2023–24ನೇ ಸಾಲಿನಿಂದ 2024–25ನೇ ಸಾಲಿನವರೆಗೆ ಪಿ.ಎ.ಬಿ ಅನುಮೋದಿತ ಪಿ.ಎಮ್.ಶ್ರೀ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ತರಗತಿಗಳು | 441 |
| 07 | ಕೆ.ಕೆ.ಆರ್.ಡಿ.ಬಿ ವಲಯದ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ತರಗತಿಗಳು | 1008 |
| | ಒಟ್ಟು | **3243** |

| | | |
|---|---|---|
| | | **ಷರತ್ತುಗಳು:**<br><br>ಈ ಕೆಳಕಂಡ ಷರತ್ತುಗಳನ್ವಯ ಪೂರ್ವ ಪ್ರಾಥಮಿಕ ತರಗತಿಗಳನ್ನು ಪ್ರಾರಂಭಿಸಲು ಸೂಚಿಸಿದೆ.<br><br>1. ಪೂರ್ವ ಪ್ರಾಥಮಿಕ LKG ಒಂದು ವಿಭಾಗವನ್ನು ಮಾತ್ರ ಪ್ರಾರಂಭಿಸುವುದು.<br>2. LKG ತರಗತಿಗೆ 4 ವರ್ಷದಿಂದ 5 ವರ್ಷದ ವಯೋಮಿತಿಯ ಒಳಗಿನ ಮಕ್ಕಳನ್ನು ದಾಖಲು ಮಾಡಿಕೊಳ್ಳುವುದು.<br>3. ಈ ವಿಭಾಗ ಪ್ರಾರಂಭಿಸಲು 4 ವರ್ಷದಿಂದ 5 ವರ್ಷದ ವಯೋಮಾನದ ಕನಿಷ್ಠ 20 ಮಕ್ಕಳು ಪ್ರವೇಶ ಪಡೆಯುವಂತಿರಬೇಕು ಹಾಗೂ ಗರಿಷ್ಠ 30 ಮಕ್ಕಳು ಮೀರದಂತೆ ದಾಖಲಿಸಿಕೊಳ್ಳುವುದು.<br>4. LKG ಪ್ರಾರಂಭಿಸಲಾದ ಮುಂದಿನ ಶೈಕ್ಷಣಿಕ ವರ್ಷದಿಂದ ಯುಕೆಜಿಯನ್ನು ಪ್ರಾರಂಭಿಸುವುದು.<br>5. ಪೂರ್ವ ಪ್ರಾಥಮಿಕ ತರಗತಿಯನ್ನು ಪ್ರಾರಂಭಿಸಲು ಒಂದು ಕೊಠಡಿಯನ್ನು ಗುರುತಿಸಿಕೊಳ್ಳುವುದು ಹಾಗೂ ಕೊಠಡಿ ಸಜ್ಜುಗೊಳಿಸುವುದು.<br><br>**ಶಿಕ್ಷಕರ ನೇಮಕಾತಿ:**<br><br>• ಸರ್ಕಾರದ ಆದೇಶ ಸಂಖ್ಯೆ: ಇಪಿ 258 ಪಿಬಿಎಸ್ 2024, ದಿನಾಂಕ:19.06.2024ರನ್ವಯ ಎಲ್.ಕೆ.ಜಿ ಮತ್ತು ಯು.ಕೆ.ಜಿ ತರಗತಿಗಳನ್ನು ಬೋಧಿಸಲು ಅತಿಥಿ ಶಿಕ್ಷಕರನ್ನು ಎಸ್.ಡಿ.ಎಂ.ಸಿ ವತಿಯಿಂದ ತಾತ್ಕಾಲಿಕವಾಗಿ 10 ತಿಂಗಳ ಅವಧಿಗೆ ನೇಮಕ ಮಾಡಿಕೊಳ್ಳಲು ಸೂಚಿಸಿದೆ. ಅತಿಥಿ ಶಿಕ್ಷಕರಿಗೆ ರೂ. 10,000/-ಗಳ ಗೌರವಧನ ನೀಡಲಾಗುತ್ತಿದೆ.<br><br>• ರಾಜ್ಯದ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ 1ನೇ ತರಗತಿಯಿಂದ ಆಂಗ್ಲ ಮಾಧ್ಯಮವನ್ನು ಪ್ರಾರಂಭಿಸಲು ಬೇಡಿಕೆ ಬಂದ ಹಿನ್ನೆಲೆಯಲ್ಲಿ ಸರ್ಕಾರವು 2019-20ನೇ ಸಾಲಿನಲ್ಲಿ 1001 ಕನ್ನಡ ಮಾಧ್ಯಮ ಶಾಲೆಗಳಲ್ಲಿ, 2020-21ನೇ ಸಾಲಿನಲ್ಲಿ 1003 ಕನ್ನಡ ಮಾಧ್ಯಮ ಶಾಲೆಗಳಲ್ಲಿ ಹಾಗೂ 400 ಉರ್ದು ಮಾಧ್ಯಮ ಶಾಲೆಗಳಲ್ಲಿ ದ್ವಿ-ಭಾಷಾ ಮಾಧ್ಯಮವನ್ನು ಪ್ರಾರಂಭಿಸಲಾಯಿತು. ಪ್ರಸ್ತುತ ಒಟ್ಟು 2404 ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ದ್ವಿ-ಭಾಷಾ ವಿಭಾಗಗಳು ಕಾರ್ಯನಿರ್ವಹಿಸುತ್ತಿವೆ. |

| | | |
|---|---|---|
| | | • 2024–25ನೇ ಸಾಲಿನಲ್ಲಿ ಸರ್ಕಾರಿ ಆದೇಶ ಸಂಖ್ಯೆ ಇಪಿ 137 ಪಿಜಿಸಿ 2024 ದಿನಾಂಕ:15/06/2024ರನ್ವಯ 1419 ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ 1ನೇ ತರಗತಿಯಿಂದ ಕನ್ನಡ/ಇತರೆ ಮಾಧ್ಯಮದ ಜೊತೆಗೆ ದ್ವಿ ಭಾಷಾ ಮಾಧ್ಯಮ(ಆಂಗ್ಲ) ತರಗತಿಗಳನ್ನು ಪ್ರಾರಂಭಿಸಿದೆ.<br>• 2ನೇ ಹಂತದಲ್ಲಿ ಸರ್ಕಾರಿ ಆದೇಶ ಸಂಖ್ಯೆ ಇಪಿ 137 ಪಿಜಿಸಿ 2024 ದಿನಾಂಕ:03/09/2024ರನ್ವಯ 373 ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ 1ನೇ ತರಗತಿಯಿಂದ ಕನ್ನಡ/ಇತರೆ ಮಾಧ್ಯಮದ ಜೊತೆಗೆ ದ್ವಿಭಾಷಾ ಮಾಧ್ಯಮ(ಆಂಗ್ಲ) ತರಗತಿಗಳನ್ನು ಪ್ರಾರಂಭಿಸಿದೆ.<br>ರಾಜ್ಯದ ಸರ್ಕಾರಿ ಪ್ರೌಢಶಾಲೆಗಳಲ್ಲಿ ಆಂಗ್ಲ ಮಾಧ್ಯಮ ತರಗತಿಗಳನ್ನು ಹೊಂದಿರುವ ಪ್ರೌಢಶಾಲೆಗಳ ಸಂಖ್ಯೆ:1650<br><br>ಸರ್ಕಾರಿ ಪ್ರೌಢಶಾಲೆಗಳಿಗೆ ಸಂಬಂಧಿಸಿದಂತೆ ಈ ತರಗತಿಗಳನ್ನು ಪ್ರಾರಂಭಿಸುವ ಬಗ್ಗೆ ಇಲಾಖೆಯ ಷರತ್ತುಗಳು:-<br><br>• ಆಂಗ್ಲ ಮಾಧ್ಯಮ ವಿಭಾಗ ನೀಡುವುದರಿಂದ ಯಾವುದೇ ಕಾರಣಕ್ಕೂ ಕನ್ನಡ ಮಾಧ್ಯಮದ ತರಗತಿಗಳಲ್ಲಿ ಶೈಕ್ಷಣಿಕ ಪ್ರಗತಿ ಕುಂಠಿತವಾಗಬಾರದು.<br>• ಆಂಗ್ಲ ಮಾಧ್ಯಮ ವಿಭಾಗವನ್ನು ಪ್ರಾರಂಭಿಸುವ ಹಾಗೂ ನಿರ್ವಹಿಸುವ ಜವಾಬ್ದಾರಿ ಹೊರುವ ಬಗ್ಗೆ ಎಸ್.ಡಿ.ಎಂ.ಸಿ ನಡವಳಿ ಕಡ್ಡಾಯವಾಗಿರುತ್ತದೆ.<br>• ಶಾಲೆಯಲ್ಲಿ ಮೂಲಭೂತ ಸೌಕರ್ಯಗಳನ್ನು ಹೊಂದಿರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.<br>• ಶಾಲೆಯಲ್ಲಿ ಕೊರತೆ ಇರುವ ಹೆಚ್ಚುವರಿ ಮೂಲಭೂತ ಸೌಕರ್ಯಗಳನ್ನು ಸಾರ್ವಜನಿಕ/ ಎಸ್.ಡಿ.ಎಂ.ಸಿ ಸಹಕಾರದಿಂದ ಅಭಿವೃದ್ಧಿಪಡಿಸಿಕೊಳ್ಳುವುದು.<br>• ಸಾರ್ವಜನಿಕರಿಂದ ನೈಜ ದೂರು/ ಆಕ್ಷೇಪಣೆಗಳಿದ್ದಲ್ಲಿ ಯಾವುದೇ ಕಾರಣಕ್ಕೂ ಶಾಲೆಯನ್ನು ಪ್ರಾರಂಭಿಸಬಾರದು.<br>• ಕನ್ನಡ ಮತ್ತು ಆಂಗ್ಲ ಮಾಧ್ಯಮಗಳೆರಡರಲ್ಲೂ ಕನಿಷ್ಠ ದಾಖಲಾತಿ/ಹಾಜರಾತಿಯನ್ನು ಕಾಯ್ದುಕೊಳ್ಳತಕ್ಕದ್ದು.<br>• ಹಾಲಿ ಇರುವ ಶಿಕ್ಷಕರೇ ಹೊಸದಾಗಿ ಪ್ರಾರಂಭಿಸಲಾಗುವ ಆಂಗ್ಲ ಮಾಧ್ಯಮ ತರಗತಿಗೆ ಪಾಠ ಬೋಧನೆ ಮಾಡತಕ್ಕದ್ದು.<br>• ಹೊಸದಾಗಿ ಹೆಚ್ಚುವರಿ ಶಿಕ್ಷಕರ ಬೇಡಿಕೆ ಸಲ್ಲಿಸಬಾರದೆಂಬ ಬಗ್ಗೆ ಸಂಬಂಧಿಸಿದ ಶಾಲೆಯ ಮುಖ್ಯ ಶಿಕ್ಷಕರು ಹಾಗೂ ಎಸ್.ಡಿ.ಎಂ.ಸಿ.ರವರಿಂದ ಮುಚ್ಚಳಿಕೆ ಪತ್ರ ಸಲ್ಲಿಸತಕ್ಕದ್ದು.<br>• ಆಂಗ್ಲ ಮಾಧ್ಯಮ ವಿಭಾಗವನ್ನು ಪ್ರಾರಂಭಿಸುವುದರಿಂದ ಸರ್ಕಾರಕ್ಕೆ ಯಾವುದೇ ಆರ್ಥಿಕ ಹೊರೆಯಾಗಬಾರದು. |

| | | |
|---|---|---|
| | | • ಪ್ರಸ್ತುತ 1ನೇ ತರಗತಿಗೆ ಮಾತ್ರ ಆಂಗ್ಲ ಮಾಧ್ಯಮ ಪ್ರಾರಂಭಿಸಿ ಮುಂದಿನ ವರ್ಷಗಳಲ್ಲಿ ಮುಂದಿನ ತರಗತಿಗೆ ವಿಸ್ತರಿಸತಕ್ಕದ್ದು.<br>• ತರಗತಿಯಲ್ಲಿ ಬೋಧನೆ ಮತ್ತು ಕಲಿಕೆಯು ಕೇವಲ ಪಠ್ಯಪುಸ್ತಕಕ್ಕೆ ಸೀಮಿತವಾಗಿರದೆ ಕಲಿಕಾ ಫಲಿತಗಳನ್ನಾಧರಿಸಿ ಚಟುವಟಿಕೆ ಆಧಾರಿತವಾಗಿರತಕ್ಕದ್ದು.<br>• ಆಯ್ಕೆಗೊಂಡ ಶಾಲೆಯಲ್ಲಿ ಪ್ರತಿ ಶಾಲೆಗೆ ಒಬ್ಬರು ಶಿಕ್ಷಕರಿಗೆ ಪ್ರಾದೇಶಿಕ ಆಂಗ್ಲ ಭಾಷೆ ತರಬೇತಿ ಸಂಸ್ಥೆಯ ಮೂಲಕ 15 ದಿನಗಳ ಪ್ರವೇಶ ತರಬೇತಿ ನೀಡತಕ್ಕದ್ದು, ಪ್ರತಿ ತಿಂಗಳು ಸಂಸ್ಥೆಗಳೊಂದಿಗೆ ವಿಡಿಯೋ ಸಮ್ಮೇಳನ ನಡೆಸತಕ್ಕದು. ಈ ಉದ್ದೇಶಕ್ಕೆ ತಗಲುವ ವೆಚ್ಚವನ್ನು ಸಂಸ್ಥೆಗೆ ಒದಗಿಸಲಾಗುವ ಅನುದಾನದಲ್ಲಿ ನಿಯಮಾನುಸಾರ ಭರಿಸತಕ್ಕದ್ದು.<br>**ಪ್ರೌಢ ಶಾಲೆಗಳ ಶಿಕ್ಷಕರ ಕುರಿತು:-**<br>ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಮತ್ತು ವಿಭಾಗಗಳನ್ನು ಆಧರಿಸಿ ಶಿಕ್ಷಕರ ಹುದ್ದೆಗಳನ್ನು ಆಯುಕ್ತಾಲಯದ ಕಛೇರಿ ಪರಿಷ್ಕೃತ ಜ್ಞಾಪನ ಸಂಖ್ಯೆ:ಸಿ4(1)/ಸ.ಪ್ರೌ.ಶಾ.ಹೆ.ಶಿ/47/2021-22, ದಿನಾಂಕ:13-04-2022 ರಂತೆ ನೀಡಲಾಗುತ್ತಿದೆ.<br>ಸರ್ಕಾರಿ ಪ್ರೌಢಶಾಲೆಗಳಲ್ಲಿ ಒಂದು ವಿಭಾಗಕ್ಕೆ ಎಪ್ಪತ್ತು ವಿದ್ಯಾರ್ಥಿಗಳಂತೆ ವಿಭಜಿಸಿ 04 ವಿಭಾಗಗಳವರೆಗೆ ಇರುವ ಶಾಲೆಗಳಿಗೆ ಮುಖ್ಯ ಶಿಕ್ಷಕರನ್ನು ಹೊರತುಪಡಿಸಿ 7 ಶಿಕ್ಷಕರನ್ನು ನೀಡಲಾಗುತ್ತದೆ. ದ್ವಿ ಮಾಧ್ಯಮ ಅಥವಾ ಒಂದು ಮಾಧ್ಯಮದ ಜೊತೆಗೆ ಆಂಗ್ಲ ಮಾಧ್ಯಮ ಇರುವಂತಹ ಪ್ರೌಢ ಶಾಲೆಗಳಲ್ಲಿ ಕೋರ್ ವಿಷಯಗಳಿಗೆ ಅದೇ ಶಿಕ್ಷಕರು 02 ಮಾಧ್ಯಮದಲ್ಲಿ ಬೋಧನೆ ಮಾಡಬೇಕು. 5 ಅಥವಾ 5 ಕ್ಕಿಂತ ಹೆಚ್ಚು ವಿಭಾಗಗಳಿದ್ದಲ್ಲಿ ಮುಖ್ಯ ಶಿಕ್ಷಕರನ್ನು ಹೊರತುಪಡಿಸಿ ಪ್ರತಿ ವಿಭಾಗಕ್ಕೆ 1.5 ರಂತೆ ಶಿಕ್ಷಕರನ್ನು ಒದಗಿಸಲಾಗುವುದು. |
| ಆ) | ಈಗಾಗಲೇ ಕಾರ್ಯಾಚರಿಸುತ್ತಿರುವ ಸರಕಾರಿ ಆಂಗ್ಲ ಮಾಧ್ಯಮ ಮತ್ತು ಎಲ್‌ಕೆಜಿ/ಯುಕೆಜಿ ತರಗತಿಗಳ ಶಿಕ್ಷಣ ಗುಣಮಟ್ಟವನ್ನು ಎನ್‌ಸಿಇಆರ್‌ಟಿಯ ಮಾರ್ಗಸೂಚಿಯಂತೆ ಕಾಯ್ದುಕೊಳ್ಳಲು ಮತ್ತು ಖಚಿತಪಡಿಸಿಕೊಳ್ಳಲು ಅನುಸರಿಸಲಾದ ಕ್ರಮಗಳೇನು; | • ರಾಜ್ಯದ 6 ರಿಂದ 10 ನೇ ತರಗತಿ ಗಣಿತ ಹಾಗೂ ವಿಜ್ಞಾನ ಪಠ್ಯಪುಸ್ತಕಗಳಲ್ಲಿ NCERT ಪಠ್ಯವಸ್ತು ಅಳವಡಿಸಲಾಗಿದೆ.<br>• ಪಠ್ಯಪುಸ್ತಕಗಳನ್ನು ಕನ್ನಡ ಮತ್ತು ಇಂಗ್ಲಿಷ್ (Bilingual) ನಲ್ಲಿ ಒದಗಿಸಲಾಗಿದೆ.<br>• EMTIP-kit ಗಳನ್ನು ಒದಗಿಸಲಾಗಿದೆ. (Learning Materials)<br>• ಜಿಲ್ಲಾ ಸಂಪನ್ಮೂಲ ತಂಡದ (DRT) ಮೂಲಕ ಶಾಲಾ ಭೇಟಿ ಮತ್ತು ಆಂಗ್ಲ ಭಾಷೆಗೆ ಸಂಬಂಧಿತ ಅನುಪಾಲನೆ, ಮಾರ್ಗದರ್ಶನ ಹಾಗೂ ಸಹಕಾರ (Academic Support) ನೀಡಲಾಗುತ್ತಿದೆ.<br>• ಇವುಗಳೆಲ್ಲವೂ ಶಾಲೆಗಳಲ್ಲಿ ಶಿಕ್ಷಕರ ತರಗತಿ ಬೋಧನೆ, ವಿದ್ಯಾರ್ಥಿಗಳ ಕಲಿಕೆ ಮತ್ತು ಶಿಕ್ಷಣ ಗುಣಮಟ್ಟ ಸುಧಾರಣೆಗೆ ಸಹಕಾರಿಯಾಗಿವೆ. |

| | | |
|---|---|---|
| | | • 2024–25 ನೇ ಸಾಲಿನಲ್ಲಿ ಪೂರ್ವ ಪ್ರಾಥಮಿಕ ತರಗತಿಗಳಲ್ಲಿ ಬೋಧಿಸುತ್ತಿರುವ ಶಿಕ್ಷಕರಿಗೆ & ಅನುಷ್ಠಾನಾಧಿಕಾರಿಗಳಿಗೆ 02 ದಿನಗಳ ಆಟಿಕೆ ಆಧಾರಿತ ಶಿಕ್ಷಣ ಶಾಸ್ತ್ರದ (Toy Based Pedagogy) ಕಾರ್ಯಾಗಾರವನ್ನು ನಡೆಸುವ ಮೂಲಕ ಈ ತರಗತಿಗಳನ್ನು ಬೋಧಿಸುವ ಶಿಕ್ಷಕರಿಗೆ ಬೋಧನಾ ವಿಧಾನದಲ್ಲಿ ತರಬೇತಿಯನ್ನು ನೀಡಿ ಅನುಪಾಲನೆ ಮಾಡಲಾಗುತ್ತಿದೆ.<br><br>• ಸರ್ಕಾರದ ಆದೇಶದನ್ವಯ SDMC ಹಂತದಲ್ಲಿ ನೇಮಕ ಮಾಡಿಕೊಂಡಿರುವ ಸರ್ಕಾರಿ ಶಾಲೆಗಳ ಪೂರ್ವ ಪ್ರಾಥಮಿಕ ತರಗತಿಗಳ ಶಿಕ್ಷಕರಿಗೆ ಬೋಧನಾ ವಿಧಾನದಲ್ಲಿ ತರಬೇತಿಯನ್ನು ನೀಡಿ ಅನುಪಾಲನೆ ಮಾಡಲಾಗುತ್ತಿದೆ.<br><br>**ಸರ್ಕಾರಿ ಪ್ರೌಢಶಾಲೆಗಳಿಗೆ ಸಂಬಂಧಿಸಿದಂತೆ:–**<br><br>• ಸರ್ಕಾರಿ ಪ್ರೌಢಶಾಲೆಗಳಲ್ಲಿ ಒಂದು ವಿಭಾಗಕ್ಕೆ ಎಪ್ಪತ್ತು ವಿದ್ಯಾರ್ಥಿಗಳಂತೆ ವಿಭಜಿಸಿ 04 ವಿಭಾಗಗಳವರೆಗೆ ಇರುವ ಶಾಲೆಗಳಿಗೆ ಮುಖ್ಯ ಶಿಕ್ಷಕರನ್ನು ಹೊರತುಪಡಿಸಿ 7 ಶಿಕ್ಷಕರನ್ನು ನೀಡಲಾಗುತ್ತದೆ. ದ್ವಿ ಮಾಧ್ಯಮ ಅಥವಾ ಒಂದು ಮಾಧ್ಯಮದ ಜೊತೆಗೆ ಆಂಗ್ಲ ಮಾಧ್ಯಮ ಇರುವಂತಹ ಪ್ರೌಢ ಶಾಲೆಗಳಲ್ಲಿ ಕೋರ್ ವಿಷಯಗಳಿಗೆ ಅದೇ ಶಿಕ್ಷಕರು 02 ಮಾಧ್ಯಮದಲ್ಲಿ ಬೋಧನೆ ಮಾಡಬೇಕು. 5 ಅಥವಾ 5 ಕ್ಕಿಂತ ಹೆಚ್ಚು ವಿಭಾಗಗಳಿದ್ದಲ್ಲಿ ಮುಖ್ಯ ಶಿಕ್ಷಕರನ್ನು ಹೊರತುಪಡಿಸಿ ಪ್ರತಿ ವಿಭಾಗಕ್ಕೆ 1.5 ರಂತೆ ಶಿಕ್ಷಕರನ್ನು ಒದಗಿಸಲಾಗುವುದು.<br><br>• ಸೇವಾ ನಿರತ ಶಿಕ್ಷಕರಿಗೆ ಮನಶ್ಚೇತನ ತರಬೇತಿ, ವಿಷಯಾಧಾರಿತ ತರಬೇತಿಗಳನ್ನು ನೀಡಲಾಗುತ್ತಿದೆ. ಇದರೊಂದಿಗೆ ಶಿಕ್ಷಕರ ವೇದಿಕೆಗಳಲ್ಲಿ ತಂತ್ರಜ್ಞಾನ ಬಳಕೆ, ಕಲಿಕಾ ಬೋಧನಾ ಪ್ರಕ್ರಿಯೆಗಳು ಮೌಲ್ಯಮಾಪನದ ಕುರಿತು ತರಬೇತಿ ನೀಡಲಾಗುತ್ತಿದೆ. |
| ಇ) | ಆಯಾ ಪ್ರದೇಶದ ಸಾರ್ವಜನಿಕರ ಬೇಡಿಕೆಯಂತೆ ಸರಕಾರಿ ಶಾಲೆಗಳಲ್ಲಿ ಆಂಗ್ಲ ಮಾಧ್ಯಮ ಮತ್ತು ಪೂರ್ವ ಪ್ರಾಥಮಿಕ ತರಗತಿಗಳನ್ನು ಪ್ರಾರಂಭಿಸಲು ಅನುಮತಿ ನೀಡುವಾಗ ಯಾವುದೇ ಹೆಚ್ಚುವರಿ ಶಿಕ್ಷಕರು, ಅನುದಾನ ಬೇಡಿಕೆಗಳನ್ನು ಶಿಕ್ಷಣ ಇಲಾಖೆಗೆ ಸಲ್ಲಿಸದಂತೆ ಹಾಗೂ ಯಾವುದೇ ಸಮಸ್ಯೆಗಳನ್ನು ಶಾಲೆ ಮತ್ತು ಎಸ್‌ಡಿಎಂಸಿ ಮಟ್ಟದಲ್ಲಿಯೇ ಪರಿಹರಿಸುವಂತೆ ಒಪ್ಪಿಕೊಳ್ಳುವ ಷರತ್ತು ವಿಧಿಸಿ ಮುಚ್ಚಳಿಕೆಯನ್ನು ತೆಗೆದುಕೊಂಡು | • ಎಲ್.ಕೆ.ಜಿ ಮತ್ತು ಯು.ಕೆ.ಜಿ ತರಗತಿಗಳಿಗೆ ಚಿಲಿಪಿಲಿ+ ಪಠ್ಯಕ್ರಮ ಆಧರಿಸಿ ಚಟುವಟಿಕೆಯ ಆಧಾರಿತ ಕಲಿಕೆಯ ಮೂಲಕ ಆನಂದದಾಯಕವಾಗಿಸಿ ಮಕ್ಕಳಿಗೆ ಪ್ರತಿ ದಿನ ಉತ್ತಮವಾದ ಕಲಿಕೆಯ ಅನುಭವವನ್ನು ನೀಡಲಾಗುತ್ತಿದೆ.<br>• ಎಲ್.ಕೆ.ಜಿ ಮತ್ತು ಯು.ಕೆ.ಜಿ ತರಗತಿಗಳಿಗೆ ಅಗತ್ಯ ಕಲಿಕೋಪಕರಣಗಳನ್ನು ಒದಗಿಸಲಾಗುತ್ತಿದೆ. ಈ ಆಧಾರದನ್ವಯ ಶಿಕ್ಷಕಿಯರಿಗೆ ತರಬೇತಿಯನ್ನು ನೀಡಲಾಗಿದೆ.<br>• ರಾಜ್ಯದ 6 ರಿಂದ 10 ನೇ ತರಗತಿ ಗಣಿತ ಹಾಗೂ ವಿಜ್ಞಾನ ಪಠ್ಯಪುಸ್ತಕಗಳಲ್ಲಿ NCERT ಪಠ್ಯವಸ್ತು ಅಳವಡಿಸಲಾಗಿದೆ. |

| | | |
|---|---|---|
| | ಇಲಾಖೆ ಗುಣಮಟ್ಟದ ಶಿಕ್ಷಣ ಮತ್ತು ಅನುದಾನ ನೀಡುವ ಜವಾಬ್ದಾರಿಯಿಂದ ನೋಡಿಕೊಂಡು ಸಾಮಾಜಿಕ ಕೆಳಸ್ತರದ ಸಮುದಾಯಗಳ ಶಿಕ್ಷಣದ ನಿರ್ಲಕ್ಷ ತೋರುತ್ತಿದೆಯೇ; | • ಪಠ್ಯಪುಸ್ತಕಗಳನ್ನು ಕನ್ನಡ ಮತ್ತು ಇಂಗ್ಲಿಷ್ (Bilingual) ನಲ್ಲಿ ಒದಗಿಸಲಾಗಿದೆ.<br>• EMTIP-kit ಗಳನ್ನು ಒದಗಿಸಲಾಗಿದೆ. (Learning Meterials)<br>• ಜಿಲ್ಲಾ ಸಂಪನ್ಮೂಲ ತಂಡದ (DRT) ಮೂಲಕ ಶಾಲಾ ಭೇಟಿ ಮತ್ತು ಆಂಗ್ಲ ಭಾಷೆಗೆ ಸಂಬಂಧಿತ ಅನುಪಾಲನೆ, ಮಾರ್ಗದರ್ಶನ ಹಾಗೂ ಸಹಕಾರ (Academic Support) ನೀಡಲಾಗುತ್ತಿದೆ.<br>• ಇವುಗಳೆಲ್ಲವೂ ಶಾಲೆಗಳಲ್ಲಿ ಶಿಕ್ಷಕರ ತರಗತಿ ಬೋಧನೆ, ವಿದ್ಯಾರ್ಥಿಗಳ ಕಲಿಕೆ ಮತ್ತು ಶಿಕ್ಷಣ ಗುಣಮಟ್ಟ ಸುಧಾರಣೆಗೆ ಸಹಕಾರಿಯಾಗಿವೆ.<br>• 2024–25 ನೇ ಸಾಲಿನಲ್ಲಿ ಪೂರ್ವ ಪ್ರಾಥಮಿಕ ತರಗತಿಗಳಲ್ಲಿ ಬೋಧಿಸುತ್ತಿರುವ ಶಿಕ್ಷಕರಿಗೆ & ಅನುಷ್ಠಾನಾಧಿಕಾರಿಗಳಿಗೆ 02 ದಿನಗಳ ಆಟಿಕೆ ಆಧಾರಿತ ಶಿಕ್ಷಣ ಶಾಸ್ತ್ರದ (Toy Based Pedagogy) ಕಾರ್ಯಾಗಾರವನ್ನು ನಡೆಸುವ ಮೂಲಕ ಈ ತರಗತಿಗಳನ್ನು ಬೋಧಿಸುವ ಶಿಕ್ಷಕರಿಗೆ ಬೋಧನಾ ವಿಧಾನದಲ್ಲಿ ತರಬೇತಿಯನ್ನು ನೀಡಿ ಅನುಪಾಲನೆ ಮಾಡಲಾಗುತ್ತಿದೆ.<br>• ಸರ್ಕಾರದ ಆದೇಶದನ್ವಯ SDMC ಹಂತದಲ್ಲಿ ನೇಮಕ ಮಾಡಿಕೊಂಡಿರುವ ಸರ್ಕಾರಿ ಶಾಲೆಗಳ ಪೂರ್ವ ಪ್ರಾಥಮಿಕ ತರಗತಿಗಳ ಶಿಕ್ಷಕರಿಗೆ ಬೋಧನಾ ವಿಧಾನದಲ್ಲಿ ತರಬೇತಿಯನ್ನು ನೀಡಿ ಅನುಪಾಲನೆ ಮಾಡಲಾಗುತ್ತಿದೆ.<br>**ಸರ್ಕಾರಿ ಪ್ರೌಢಶಾಲೆಗಳಿಗೆ ಸಂಬಂಧಿಸಿದಂತೆ:–**<br>• ಸರ್ಕಾರಿ ಪ್ರೌಢಶಾಲೆಗಳಲ್ಲಿ ಒಂದು ವಿಭಾಗಕ್ಕೆ ಎಪ್ಪತ್ತು ವಿದ್ಯಾರ್ಥಿಗಳಂತೆ ವಿಭಜಿಸಿ 04 ವಿಭಾಗಗಳವರೆಗೆ ಇರುವ ಶಾಲೆಗಳಿಗೆ ಮುಖ್ಯ ಶಿಕ್ಷಕರನ್ನು ಹೊರತುಪಡಿಸಿ 7 ಶಿಕ್ಷಕರನ್ನು ನೀಡಲಾಗುತ್ತದೆ. ದ್ವಿ ಮಾಧ್ಯಮ ಅಥವಾ ಒಂದು ಮಾಧ್ಯಮದ ಜೊತೆಗೆ ಆಂಗ್ಲ ಮಾಧ್ಯಮ ಇರುವಂತಹ ಪ್ರೌಢ ಶಾಲೆಗಳಲ್ಲಿ ಕೋರ್ ವಿಷಯಗಳಿಗೆ ಅದೇ ಶಿಕ್ಷಕರು 02 ಮಾಧ್ಯಮದಲ್ಲಿ ಬೋಧನೆ ಮಾಡಬೇಕು. 5 ಅಥವಾ 5 ಕ್ಕಿಂತ ಹೆಚ್ಚು ವಿಭಾಗಗಳಿದ್ದಲ್ಲಿ ಮುಖ್ಯ ಶಿಕ್ಷಕರನ್ನು ಹೊರತುಪಡಿಸಿ ಪ್ರತಿ ವಿಭಾಗಕ್ಕೆ 1.5 ರಂತೆ ಶಿಕ್ಷಕರನ್ನು ಒದಗಿಸಲಾಗುವುದು.<br>• ಸೇವಾ ನಿರತ ಶಿಕ್ಷಕರಿಗೆ ಪುನಶ್ಚೇತನ ತರಬೇತಿ, ವಿಷಯಾಧಾರಿತ ತರಬೇತಿಗಳನ್ನು ನೀಡಲಾಗುತ್ತಿದೆ. ಇದರೊಂದಿಗೆ ಶಿಕ್ಷಕರ ವೇದಿಕೆಗಳಲ್ಲಿ ತಂತ್ರಜ್ಞಾನ ಬಳಕೆ, ಕಲಿಕಾ ಬೋಧನಾ ಪ್ರಕ್ರಿಯೆಗಳು ಮೌಲ್ಯಮಾಪನದ ಕುರಿತು ತರಬೇತಿ ನೀಡಲಾಗುತ್ತಿದೆ. |

| | | |
|---|---|---|
| | | • ಎಲ್.ಕೆ.ಜಿ ಮತ್ತು ಯು.ಕೆ.ಜಿ ತರಗತಿಗಳಿಗೆ ಇಲಾಖೆ ವತಿಯಿಂದಲೇ ಪೂರ್ವ ಪ್ರಾಥಮಿಕ ತರಗತಿಗಳ Child Friendly Furniture, BALA Features, OUT Door Play Material, TLM for Children ಮತ್ತು ಶಿಕ್ಷಕರಿಗೆ ಹಾಗೂ ಆಯಾಗಳಿಗೆ ವೇತನ ಸೇರಿದಂತೆ ಎಲ್ಲಾ ಅನುದಾನವು ಸರ್ಕಾರದ ವತಿಯಿಂದಲೇ ಭರಿಸಲಾಗುತ್ತಿದೆ. |
| ಈ) | ಒಂದು ವೇಳೆ ಇಲ್ಲವೆಂದಾದಲ್ಲಿ ಅದಕ್ಕೆ ಪೂರಕವಾಗಿ ಸರಕಾರ ಈಗಾಗಲೇ ತೆಗೆದುಕೊಂಡಿರುವ ಮತ್ತು ಮುಂದೆ ತೆಗೆದುಕೊಳ್ಳಲು ಉದ್ದೇಶಿಸಿರುವ ಶಿಕ್ಷಣ ಗುಣಮಟ್ಟ ಖಾತರಿಪಡಿಸುವ ಕ್ರಮಗಳೇನು; (ವಿವರ ನೀಡುವುದು) | • 2019-20ನೇ ಸಾಲಿನಿಂದ ರಾಜ್ಯ ಸರ್ಕಾರವು ಶಾಲಾ ಮಕ್ಕಳಿಗೆ ಸುವ್ಯವಸ್ಥಿತ ಗುಣಾತ್ಮಕ ಪ್ರಾಥಮಿಕ ಶಿಕ್ಷಣವನ್ನು ನೀಡುವ ಮತ್ತು ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳ ಕಲಿಕೆಯನ್ನು ಉತ್ತಮಪಡಿಸುವ ಸದುದ್ದೇಶದಿಂದ ಪ್ರಾಥಮಿಕ ಶಾಲೆಗಳಲ್ಲಿ ಹಾಲಿ ನಡೆಯುತ್ತಿರುವ ಕನ್ನಡ/ಇತರೆ ಮಾಧ್ಯಮದ ಜೊತೆಗೆ ಪ್ರಥಮ ಹಂತದಲ್ಲಿ ಹೊಸದಾಗಿ 1001 ಆಂಗ್ಲ ದ್ವಿ ಭಾಷಾ ಮಾಧ್ಯಮ (Bilingual) ತರಗತಿಗಳನ್ನು ಪ್ರಾರಂಭಿಸಿದೆ. ಇಲ್ಲಿಯವರೆಗೆ ಒಟ್ಟು 4129 ಶಾಲೆಗಳಲ್ಲಿ ಆಂಗ್ಲ ದ್ವಿ ಭಾಷಾ ಮಾಧ್ಯಮ (Bilingual) ತರಗತಿಗಳನ್ನು ಪ್ರಾರಂಭಿಸಿದೆ. ಪ್ರತಿ ವರ್ಷ ಸದರಿ ಶಾಲೆಗಳಲ್ಲಿ ಬೋಧಿಸುತ್ತಿರುವ ಶಿಕ್ಷಕರುಗಳಿಗೆ EMTIP (English Medium Teachers Induction Programme) 8 ದಿನಗಳ ತರಬೇತಿಯನ್ನು ನೀಡಲಾಗುತ್ತಿದೆ. (Learning outcome based). ಸದರಿ ಸಾಲಿನಲ್ಲಿ 1 ರಿಂದ 6 ನೇ ತರಗತಿಯನ್ನು ಬೋಧಿಸುವ 8680 ಶಿಕ್ಷಕರಿಗೆ ತರಬೇತಿಯನ್ನು ನೀಡಲಾಗಿದೆ. |
| ಉ) | ಬಿಸಿಯೂಟ ಸಿಬ್ಬಂದಿಗಳಿಗೆ ಕನಿಷ್ಟ ಗೌರವಧನ ನೀಡಿ ಪೂರ್ಣ ಜವಾಬ್ದಾರಿಯನ್ನು ನೀಡದೆ ಅವರ ಮೇಲೆ ಅಗತ್ಯ ನಿಯಂತ್ರಣವನ್ನೂ ಹೊಂದದೆ ಆಗಾಗ ಮುಷ್ಕರದ ಮೂಲಕ ಬಿಸಿಯೂಟ ವ್ಯತ್ಯಯವಾಗುವ ಪರಿಸ್ಥಿತಿ ಉದ್ಭವಿಸಿರುವುದನ್ನು ಸರಿಪಡಿಸಲು ಕೈಗೊಂಡ ಕ್ರಮವೇನು? | ರಾಜ್ಯದ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಪಿಎಂ ಪೋಷಣ್ (ಮಧ್ಯಾಹ್ನ ಉಪಹಾರ ಯೋಜನೆ) ಯೋಜನೆಯಡಿ ಶಾಲೆಗಳು ನಡೆಯುವ ದಿನಗಳಲ್ಲಿ ಅಡುಗೆ ಕೇಂದ್ರಗಳಲ್ಲಿ ದಿನಂಪ್ರತಿ 4 (ನಾಲ್ಕು) ಗಂಟೆಗಳ ಕಾಲ ವಾರ್ಷಿಕ 10 ತಿಂಗಳ ಅವಧಿಗೆ ತಾತ್ಕಾಲಿಕವಾಗಿ ಅಡುಗೆ ತಯಾರಿಸಿ ವಿತರಿಸುವ ಕೆಲಸವನ್ನು ಅಡುಗೆ ಸಿಬ್ಬಂದಿಗಳು ನಿರ್ವಹಿಸುತ್ತಿದ್ದಾರೆ.<br><br>ಅಡುಗೆ ಸಿಬ್ಬಂದಿಗಳಿಗೆ ಕೇಂದ್ರ ಸರ್ಕಾರದ ನಿಯಮಗಳಂತೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದಿಂದ 60:40 ಅನುಪಾತದಲ್ಲಿ ರೂ.600+400=1000/- ಗಳ ಗೌರವಧನದೊಂದಿಗೆ ಹೆಚ್ಚುವರಿಯಾಗಿ ರಾಜ್ಯ ಸರ್ಕಾರದದಿಂದ ಗೌರವಧನ ಅನುದಾನ ಮುಖ್ಯ ಅಡುಗೆಯವರಿಗೆ ರೂ.2700/-, ಸಹಾಯಕ ಅಡುಗೆಯವರಿಗೆ ರೂ. 2600/-ರಂತೆ ಒಟ್ಟು 3700/- ಮತ್ತು 3600/- ಗಳಂತೆ ಮಾಹೆಯಾನ ಒಟ್ಟು ಗೌರವಧನ ವಾರ್ಷಿಕ 10 ತಿಂಗಳಿಗೆ ಪಾವತಿಸಲಾಗುತ್ತಿದೆ.<br><br>ಅಡುಗೆ ಸಿಬ್ಬಂದಿಗಳು ಖಾಯಂ ನೌಕರರಲ್ಲ ಹಾಗೂ ಇವರು ಅಸಂಘಟಿತ ವಲಯಕ್ಕೆ ಬರುತ್ತಾರೆ. ಇವರಿಗೆ ಕಾರ್ಮಿಕ ನೀತಿ ನಿಯಮಗಳಡಿ ಸೇವಾ ಸವಲತ್ತುಗಳನ್ನು ನೀಡಲು ಅವಕಾಶವಿರುವುದಿಲ್ಲ. |

| | | | |
|---|---|---|---|
| | | | ರಾಜ್ಯದಲ್ಲಿ ಸದರಿ ಅಡುಗೆ ಸಿಬ್ಬಂದಿಗಳ ಒಕ್ಕೂಟಗಳು ಆಗಾಗ್ಗೆ ಮುಷ್ಕರ ನಡೆಸುತ್ತಾ ಸರ್ಕಾರಕ್ಕೆ ತಮ್ಮ ಸೇವಾ ಸೌಲಭ್ಯಗಳಿಗಾಗಿ ಹಲವಾರು ಅಹವಾಲುಗಳನ್ನು ಸಲ್ಲಿಸುತ್ತಿರುವ ಅಡುಗೆ ಸಿಬ್ಬಂದಿಗಳು ಮುಷ್ಕರ ನಡೆಸಿದ ಸಂದರ್ಭದಲ್ಲಿ ಶಾಲೆಗಳಲ್ಲಿ ಯಾವುದೇ ಬಿಸಿಯೂಟ ಸಿದ್ಧತೆ ಮತ್ತು ವಿತರಣೆಯಲ್ಲಿ ವ್ಯತ್ಯಾಸ ಉಂಟಾಗದಂತೆ ಅಗತ್ಯ ಕ್ರಮವಹಿಸಲಾಗುತ್ತಿದೆ. ಇದುವರೆಗೂ ಪರಿಸ್ಥಿತಿ ವ್ಯತ್ಯಯವಾಗಿರುವ ಬಗ್ಗೆ ವರದಿಗಳು ಇಲ್ಲವೇ ದೂರುಗಳು ಇಲಾಖೆಗೆ ಬಂದಿರುವುದಿಲ್ಲ. ಶಾಲಾ ಮುಖ್ಯ ಶಿಕ್ಷಕರು ಈ ಸಂಬಂಧ ಸೂಕ್ತ ವ್ಯವಸ್ಥೆ ಮಾಡಿಕೊಂಡು ಬಿಸಿಯೂಟವನ್ನು ಶಾಲಾ ಮಕ್ಕಳಿಗೆ ನಿರಂತರ ಒದಗಿಸುವ ಕೆಲಸ ನಿರ್ವಹಿಸುತ್ತಿದ್ದಾರೆ. ಮುಷ್ಕರ ಸಂದರ್ಭದಲ್ಲಿ ಸದರಿ ಅಡುಗೆ ಸಿಬ್ಬಂದಿಗಳು ಸಲ್ಲಿಸುವ ಹಲವಾರು ಅಹವಾಲುಗಳು, ಬೇಡಿಕೆಗಳ ಬಗ್ಗೆ – ಸರ್ಕಾರವು ಪರಿಶೀಲಿಸಿ, ಸೂಕ್ತ ತೀರ್ಮಾನ ತೆಗೆದುಕೊಂಡು ಇತ್ಯರ್ಥ ಪಡಿಸುತ್ತಿದೆ. |

ಸಂಖ್ಯೆ: ಇಪಿ 120 ಪಿಎಂಸಿ 2025

(ಎಸ್.ಮಧು ಬಂಗಾರಪ್ಪ)

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು